# ಅಭಿಮನ್ಯು

ನೆಲಸಮ ಮಾಡಲಾಗಿದೆ ಅವರ
ಗುಡಿಸಲುಗಳನು ರಸ್ತೆ ನಿರ್ಮಿಸಲೆಂದು
ಕದಲುತ್ತಿಲ್ಲ ಅವರು ನೆಲಬಿಟ್ಟು
ತಮ್ಮ ಜುಗ್ಗಿಗಳು ಮುರಿದ ಮೇಲೂ
ಜೇನುಗೂಡಿಂದ ಜೇನೆಲ್ಲ
ದೋಚಿಕೊಂಡರೂ
ಜೇನ್ನೊಣ ಗೂಡು ತೊರೆಯದಂತೆ

ಕುಳಿತ್ತಿದ್ದಾರೆ ತಮ್ಮ ಉಧ್ವಸ್ತ ಮನೆ
ಮಾರುಗಳ ಮಗ್ಗುಲಿಗೆ ತಾವೂ
ಉಧ್ವಸ್ತರಾಗಿ
ಮಳೆಬಂದರೆ ತಗಡಿನಾಸರೆ ಪಡೆದು
ಸುತ್ತಿಕೊಳ್ಳುತ್ತಾರೆ ತಲೆಗೆ ಪ್ಲಾಸ್ಟಿಕ್
ಒಲೆಹೊತ್ತದಿದ್ದರೂ ಚಿಂತೆಯಿಲ್ಲ

ಅದೇನು ಹೊಸದಲ್ಲ ಅವರಿಗೆ
ಎಲ್ಲೋ ಕಳೆದುಹೋದ
ಅಭಿಮನ್ಯು ಸಂತಾನಗಳಿವರು
ಗರ್ಭದಲ್ಲಿಯೇ ಕಲಿತಿರುತ್ತಾರೆ
ಹಸಿವಿನ ಚಕ್ರ ಭೇದಿಸುವುದನು
ಮುಗಿಲನು ಛಾವಣಿಯಾಗಿಸುವುದನು

ಆದರೆ... ಯಾವತ್ತು ಎಲ್ಲಿ ಯಾವ
ಚಕ್ರವ್ಯೂಹದಲ್ಲಿ ಸಿಲುಕಿ ಇವರು
ವಿವಶರಾಗುತ್ತಾರೋ..?
ಯಾವ ಹುನ್ನಾರಕೆ ಸಿಕ್ಕು
ಸಾಯುತ್ತಾರೋ?...
ಎಂಬುದು ಇವರಿಗೂ ತಿಳಿದಿಲ್ಲ

● ಹಿಂದಿ ಮೂಲ: ಅಂಜನಾ ವರ್ಮಾ
ಕನ್ನಡಕ್ಕೆ: ಗಿರೀಶ ಚಂದ್ರಕಾಂತ ಜಕಾಪುರೆ

